# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : **968 /2021**

**ಚಾಸಾ :- 03 / ಪ್ರಾಸಾ :- 05**

| | |
|---|---|
| ಹೆಸರು | ರಾಜಶೇಖರ್ |
| ತಂದೆ ಹೆಸರು | ಶ್ರೀನಿವಾಸಯ್ಯ |
| ವಯಸ್ಸು | 57 |
| ಉದ್ಯೋಗ | ವ್ಯವಸಾಯ |
| ವಿಳಾಸ | ಬಾಳೇನಹಳ್ಳಿ |

**ದಿನಾಂಕ: 29.02.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1,2 ಮತ್ತು 4 ರಿಂದ 8 ರವರು ಪರಿಚಯ ಇರುತ್ತಾರೆ. 1, 3 ಮತ್ತು 6 ನೇ ಆರೋಪಿತರು ಪರಿಚಯ ಇರುತ್ತಾರೆ, ಉಪದ ಆರೋಪಿಗಳು ನನಗೆ ಅಷ್ಟಾಗಿ ಪರಿಚಯ ಇರುವುದಿಲ್ಲ. ದಿನರಾಕ 05.04.2020 ರಲ್ಲಿ ಚಾಸಾ-1 ರವರ ಜೊತೆ ನಾನು, ಚಾಸಾ-4 ರಿಂದ 6 ಮತ್ತು 8 ರವರು ಗುದ್ದಲಿಪೂಜೆಗಾಗಿ ಬಸವನಪಾಳ್ಯಕ್ಕೆ ಹೋಗಿದ್ದೆವು. ಆಗ ಸಮಯ 12.30 ಆಗಿತ್ತು. ಕಾಮಗಾರಿ ಪೂಜೆಗೆ ಹೋದಾಗ 10-12 ಜನ ಗುಂಪು ಕಟ್ಟಿಕೊಂಡು ಬಂದು ಚಾಸಾ -1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಕಾಮಗಾರಿ ಮಾಡಲು ಬಿಡುವುದಿಲ್ಲ, ಹೇಗೆ ಮಾಡುತ್ತೀರಿ ನೋಡುತ್ತೇವೆ ಎಂದು ಹೇಳಿದರು. ನಂತರ ನೂಕುನುಗ್ಗಲಾಗಿ ಗಲಾಟೆ ಆಗಿರುತ್ತದೆ. ನಂತರ ಚಾಸಾ-1 ರವರ ಗನ್ ಮ್ಯಾನ್ ಹಾಗೂ ಪಿಎ ಎರವರು ಸಮಾಧಾನಪಡಿಸಿ ಪೂಜೆ ಮಾಡಿಸಿರುತ್ತಾರೆ. ನಂತರ ಬಂದು ಪೋಲಿಸ್ ?ದೂರನ್ನು ಕೊಟ್ಟಿರುತ್ತೇವೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಆರೋಪಿಗಳು ಗುಂಪುಕಟ್ಟಿ ನೂಕುನುಗ್ಗಲು ಮಾಡಿ ಶಾಶಕರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹೇಗೆ ಕೆಲಸ ಮಾಡುತ್ತೀರಿ ನೋಡುತ್ತೇವೆ ಎಂದು ಬೆದರಿಕೆ ಸಹ ಹಾಕಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು :- ಶ್ರೀ. ಆರ್ ಎಸ್?**ವಕೀಲರಿಂದ **ಆರೋ**ಪಿಗ**ಳ** ಪರವಾಗಿ :-

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವೇನಾದರೂ ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕಂದು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ 06.05.2020 ರಂದು ಎಂದು ನುಡಿಯುತ್ತಾರೆ. ಘಟನೆ ಆದಾಗ ಸ್ಥಳದಲ್ಲಿ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿಯು ಸುಮಾರು 60-70 ಜನರು ಇದ್ದರು ಎಂದು ನುಡಿಯುತ್ತಾರೆ. ನೀವು ಜೆಡಿಎಸ್ ?ಲೀಡರ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಯಾವ ಪಕ್ಷದ ಲೀಡರ್ಸ್ ಎಂದು ಹೇಳಬಹುದೆ ಎಂದರೆ ಸಾಕ್ಷಿ ಕಾಂಗ್ರೆಸ್ ? ಎಂದು ನುಡಿಯುತ್ತಾರೆ. ಗಲಾಟೆ ಆದಾಗ ಸರ್ಕಾರಿ ಅಧಿಕಾರಿಗಳು ಯಾರಾದರೂ ಇದ್ದಿದ್ದರ ಎಂದರೆ ಸಾಕ್ಷಿ ಹೌದು ಇಂಜಿನಿಯರ್ ಮತ್ತು ಪಿಡಿಒ ಇದ್ದರು ಎಂದು ನುಡಿಯುತ್ತಾರೆ, ಸದರಿ ಪಿಡಿಒ ಹಾಗೂ ಇಂಜಿನಿಯರ್ ರವರ ಹೆಸರು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ರಸ್ತೆ ಕಾಮಗಾರಿ ಕಾರ್ಯ ಯಾವ

ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸಾಕ್ಷಿಯು ಕಲ್ಯಾ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಎಂದು ನುಡಿಯುತ್ತಾರೆ. ಗನ್ ಮ್ಯಾನ್ ?ಯಾರು ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ವೀರೇಶ್ ?ಎಂದು ನುಡಿಯುತ್ತಾರೆ. 12.30 ರ ಸಮಯದಲ್ಲಿ ಯಾವುದೇ ಕಾರ್ಯಕ್ರಮ ಇದ್ದಿರಲಿಲ್ಲ ಹಾಗೂ ಆರೋಪಿಗಳು ಚಾಸಾ- 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಸಾಮಾಜಿಕ ಕಾರ್ಯಕರ್ತ ಎಂದು ಕೆಲಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮೇಲೆ ಹಲವಾರು ಕ್ರಿಮಿನಲ್ ಪ್ರಕರಣಗಳು ಇವೆ ಎಂದರೆ ಸಾಕ್ಷಿ ಒಂದು ಪ್ರಕರಣ ಇರುತ್ತದೆ ಎಂದು ನುಡಿಯುತ್ತಾರೆ.

ಮಾಗಡಿ ಪೋಲಿಸ್ ?ಠಾಣೆಯ ವ್ಯಾಪ್ತಿಯಲ್ಲಿ ನಿಮ್ಮನ್ನು ರೌಡಿ ಲಿಸ್ಟ್ ನಲ್ಲಿ ಸೇರಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಗಲಾಟೆ ಮಾಡದೆ ಇದ್ದರೂ ಚಾಸಾ-1 ರವರು ನೀಡಿದ ಸುಳ್ಳು ದೂರಿನ ಮೇರೆಗೆ ನೀವು ಸದರಿ ಚಾಸಾ-1 ರವರ ಬೆಂಬಲಿಗರಾದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ದಿನಾಂಕ 06.05.2020 ರಂದು ನೀವು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.ಆರೋಪಿಗಳು ಕಾಂಗ್ರೆಸ್ ಕಾರ್ಯಕರ್ತರಾದ ಕಾರಣ ಚಾಸಾ-1 ರವರಿಗೆ ಜಯಕಾರ ಹಾಕಿರುವುದಿಲ್ಲ ಎಂದು ಚಾಸಾ-1 ರವರ ಪ್ರಭಾವ ಭೀರಿ ಸುಳ್ಳು ದೂರನ್ನು ಸಲ್ಲಿಸಿ ನಿಮ್ಮ ಕಡೆಯವರನ್ನು ಸಾಕ್ಷಿಯನ್ನಾಗಿ ಮಾಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಶಾಶಕರ ಸರ್ಕಾರಿ ಕರ್ತವ್ಯಕ್ಕೆ ಯಾವುದೇ ರೀತಿಯಿಂದಲೂ ಅಡ್ಡಿಪಡಿಸಿರುವುದಿಲ್ಲ ಹಾಗೂ ಬೆದರಿಕೆಯನ್ನು ಹಾಕಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-2 ರವರು ಚಾಸಾ-1 ರವರಿಗೆ ಏನು

ಆಗಬೇಕು ಎಂದರೆ ಸಾಕ್ಷಿ ಚಾಸಾ-1 ರವರ ಪಿಎ ಎಂದು ನುಡಿಯುತ್ತಾರೆ. ಚಾಸಾ-4 ರಿಂದ 8, 10 ಮತ್ತು 11 ರವರು ಚಾಸಾ-1 ರವರ ಬೆಂಬಲಿಗರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹೋದಂತಹ ಗ್ರಾಮಕ್ಕೆ ಸದರಿ ಗ್ರಾಮದ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ 50-60 ಎಂದು ನುಡಿಯುತ್ತಾರೆ. ಸದರಿಯವರು ಯಾರು ಎಂದು ಹೇಳಲು ಆಗುವುದಿಲ್ಲ. ಯಾವುದೇ ಕೃತ್ಯ ನಡೆದಿರುವುದಿಲ್ಲ , ಶಾಶಾಕರು ದೂರನ್ನು ನೀಡಿರುತ್ತಾರೆ ಎಂದು ಅದಕ್ಕೆ ಪೂರಕವಾಗಿ ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**